ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-10 ಸಂಚಿಕೆ-1 ತ್ರೈಮಾಸಿಕ ಏಪ್ರಿಲ್-ಜೂನ್ 2023 ಪುಟಗಳು-12



# ಉಚಿತ ವಿದ್ಯುತ್ ನೀಡುವ ಯೋಜನೆ

ರಾಜ್ಯ ಸರ್ಕಾರ ಜಾರಿಗೆ ತಂದಿರುವ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ "ಗೃಹ ಜ್ಯೋತಿ ಯೋಜನೆ" ಕುರಿತು **ಇಂಧನ ಸಚಿವ ಸನ್ಮಾನ್ಯ ಕೆ.ಜೆ. ಜಾರ್ಜ್** ಅವರು ದಿನಾಂಕ 07-06-2023 ರಂದು ಬೆವಿಕಂ ನಿಗಮ ಕಚೇರಿಯ ಸಮ್ಮೇಳನ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಈ ಸಂದರ್ಭದಲ್ಲಿ ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ **ಶ್ರೀ ಗೌರವ್ ಗುಪ್ತಾ**, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರು **ಶ್ರೀ ಮಹಾಂತೇಶ ಬೀಳಗಿ** ಹಾಗು ಬೆಸ್ಕಾಂ ನಿರ್ದೇಶಕರು (ಹಣಕಾಸು) **ಶ್ರೀ ಜೆ. ದರ್ಶನ್** ಅವರು ಭಾಗವಹಿಸಿದ್ದರು.











## ವ್ಯವಸ್ಥಾಪಕ ನಿರ್ದೇಶಕರ ನುಡಿ



ಕಳೆದ ಹಣಕಾಸು ವರ್ಷದಲ್ಲಿ ಬೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಅವಿರತ ಶ್ರಮ ಹಾಗೂ ಸೇವೆ ಆದರಣೀಯವಾದುದು. ಬೆವಿಕಂ ತನ್ನ ಎಲ್ಲಾ ಆಯಾಮಗಳಲ್ಲೂ ಯಶಸ್ವಿ ವರ್ಷವನ್ನಾಗಿ ಪೂರೈಸುವಲ್ಲಿ ಕಾರಣೀಕರ್ತರಾದ ತಮ್ಮೆಲ್ಲರಿಗೂ ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ಹಲವಾರು ಸವಾಲುಗಳನ್ನು ಈಗಾಗಲೇ ಎದುರಿಸುತ್ತಿದ್ದೇವೆ. ಕಳೆದ ಹಣಕಾಸು ವರ್ಷಕ್ಕನುಗುಣವಾಗಿ ವಿದ್ಯುತ್ ಸಂಬಂಧಿತ ಯೋಜನೆಗಳನ್ನು ಹಾಗೂ ನೂತನ ಸರ್ಕಾರ ಜಾರಿಗೆ ತಂದಿರುವ ಮತ್ತು ತರುವ ನೂತನ ಯೋಜನೆಗಳ ರೂಪುರೇಷೆಗಳನ್ನು ಗ್ರಾಹಕರಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖರಾಗಬೇಕಾದದ್ದು ಅತ್ಯವಶ್ಯಕವಾಗಿದೆ.

ಪ್ರತಿಯೊಂದಕ್ಕೂ ವಿದ್ಯುತ್ತನ್ನೆ ಅವಲಂಬಿಸಿರುವ ಈ ದಿನಗಳಲ್ಲಿ ಕೆಲ ಗಂಟೆಗಳ ಕಾಲ ವಿದ್ಯುತ್ ಕಡಿತವಾದರೆ ಕಷ್ಟ. ಅಂತಹದರಲ್ಲಿ ಮಳೆಗಾಲ ಪ್ರಾರಂಭವಾದರೆ ವಿದ್ಯುತ್ ಕ್ಷೇತ್ರ ಎದುರಿಸುವ ಸವಾಲುಗಳು ನೂರಾರು. ಉದಾಹರಣೆಗೆ, ವಿದ್ಯುತ್ ತಂತಿಗಳ ಮೇಲೆ ಮರಗಳು ಬಿದ್ದು ತಂತಿಗಳು ತುಂಡಾಗುವುದು, ವಿದ್ಯುತ್ ಕಂಬಗಳು ಮುರಿಯುವುದು, ವಿದ್ಯುತ್ ಪರಿವರ್ತಕ ಕೇಂದ್ರಗಳ ವೈಫಲ್ಯತೆ ಸೇರಿದಂತೆ ಮುಂತಾದ ಸವಾಲುಗಳು ಮುಂದಿನ ಮುರ್ನಾಲ್ಕು ತಿಂಗಳಲ್ಲಿ ಎದುರಾಗಲಿದೆ. ಇಂತಹ ಸನ್ನಿವೇಶಗಳನ್ನು ನಾವೆಲ್ಲರೂ ಒಗ್ಗೂಡಿ ಎದುರಿಸಬೇಕಿದೆ.

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ 'ಗೃಹ ಜ್ಯೋತಿ' ಯೋಜನೆಯಡಿ ಪ್ರತಿ ಗೃಹ ಬಳಕೆಯ ಗ್ರಾಹಕರಿಗೆ ಮಾಸಿಕ 200 ಯೂನಿಟ್ ಗಳವರೆಗೆ ಉಚಿತ ವಿದ್ಯುತ್ ನೀಡಲಾಗುವುದು. ಈ ಯೋಜನೆಯ ನೋಂದಣಿಯಿಂದ ಆರಂಭಿಸಿ, ಅದರ ಫಲಾನುಭವಿಗಳಾಗಲು ಅರ್ಹತೆಗಳು ಅಥವಾ ನೋಂದಾಯಿಸುವ ವಿಧಾನಗಳ ಕುರಿತಂತೆ ಗ್ರಾಹಕರಲ್ಲಿ ಅರಿವು ಮೂಡಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ.

ಹಾಗೂ ವಿದ್ಯುತ್ ಬಿಲ್ ಕುರಿತಂತೆ ಗ್ರಾಹಕರಲ್ಲಿರುವ ಗೊಂದಲಗಳನ್ನು ನಿವಾರಿಸುವಲ್ಲಿ ಬೆಸ್ಕಾಂನ ಎಲ್ಲಾ ಸಿಬ್ಬಂದಿಗಳು ಸಶಕ್ತರಾಗಿ ಕಾರ್ಯನಿರ್ವಹಿಸಬೇಕು. ಬೆವಿಕಂಗೆ ಸಂಬಂಧಿಸಿದಂತೆ ಎಲ್ಲಾ ಯೋಜನೆಗಳ ಕುರಿತಾದ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವುದರೊಂದಿಗೆ, ಪ್ರಸ್ತುತ ಹಣಕಾಸು ವರ್ಷವನ್ನು ಯಶಸ್ವಿಯಾಗಿಸೋಣ.

ವಂದನೆಗಳೊಂದಿಗೆ,

**ಮಹಾಂತೇಶ ಬೀಳಗಿ,** ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

## ತಾಂತ್ರಿಕ ನಿರ್ದೇಶಕರು ರವರ ಸಂದೇಶ



ಘನ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಗೃಹ ಜ್ಯೋತಿ ಯೋಜನೆಯು ದಿನಾಂಕ 18.06.2023 ರಿಂದ ಜಾರಿಯಾಗಿದ್ದು, ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಗ್ರಾಹಕರು ಅರ್ಜಿಗಳನ್ನು ಸಲ್ಲಿಸಲು ಬೆವಿಕಂ ಕಚೇರಿಗಳಲ್ಲಿ ಪ್ರತ್ಯೇಕ ಕೌಂಟರ್‌ಗಳನ್ನು ಸ್ಥಾಪಿಸಲಾಗಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವುದನ್ನು ಗಮನಿಸಲಾಗಿದೆ. ಅರ್ಜಿ ಸಲ್ಲಿಸಲು ಬರುವ ಗ್ರಾಹಕರೊಂದಿಗೆ ಬೆವಿಕಂ ಸಿಬ್ಬಂದಿ ಸೌಹಾರ್ದಯುತವಾಗಿ ನಡೆದುಕೊಳ್ಳುವುದು ಹಾಗೂ ಉತ್ತಮ ಗ್ರಾಹಕ ಸ್ನೇಹಿ ವಾತಾವರಣವನ್ನು ನಿರ್ಮಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.

ರಾಜ್ಯದಲ್ಲಿ ಮುಂಗಾರು ಪ್ರಾರಂಭವಾಗಿದ್ದು, ವಿದ್ಯುತ್ ವಿತರಣಾ ಜಾಲದಲ್ಲಿ ಉಂಟಾಗುವ ತಾಂತ್ರಿಕ ದೋಷಗಳನ್ನು ನಿಗದಿತ ಸಮಯದಲ್ಲಿ ಸರಿಪಡಿಸಿ ಗ್ರಾಹಕರಿಗೆ ಅಡಚಣೆರಹಿತ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯ ಪ್ರವೃತ್ತರಾಗಬೇಕಾಗಿರುತ್ತದೆ. ಜೊತೆಯಲ್ಲಿ ವಿದ್ಯುತ್ ಅವಘಡಗಳಿಂದ ನೌಕರರ ಮತ್ತು ನಾಗರೀಕರ ಸುರಕ್ಷತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ ಎಂಬ ಅಂಶವನ್ನು ಮನಗೊಂಡು ಉತ್ತಮ ರೀತಿಯಲ್ಲಿ ಗ್ರಾಹಕ ಸ್ನೇಹಿಯಾಗಿ ಕಾರ್ಯನಿರ್ವಹಿಸೋಣ ಎಂದು ತಿಳಿಸಲು ಆಶಿಸುತ್ತೇನೆ.

**ಹೆಚ್.ಜೆ. ರಮೇಶ್**
ನಿರ್ದೇಶಕರು (ತಾಂತ್ರಿಕ)

# ಉಚಿತ ಬೆಳಕಿನಿಂದ ಸುಸ್ಥಿರ ಬದುಕು – "ಗೃಹ ಜ್ಯೋತಿ ಯೋಜನೆ"

ಉಚಿತ ಬೆಳಕು ರಾಜ್ಯದ ನಿವಾಸಿಗಳಿಗೆ ಬುನಾದಿ. ಅವರನ್ನು ಸಬಲೀಕರಣಗೊಳಿಸಲು ಹಾಗೂ ಬೆಂಬಲಿಸುವ ನಿಟ್ಟಿನಲ್ಲಿ ಹಾಗೂ ಸುಸ್ಥಿರ ಬದುಕು ಸಾಧಿಸುವಲ್ಲಿ ಕರ್ನಾಟಕ ಸರ್ಕಾರ ಪರಿಚಯಿಸಿದ **'ಗೃಹ ಜ್ಯೋತಿ ಯೋಜನೆ'**ಯು ಪ್ರಮುಖ ಪಾತ್ರವಹಿಸುತ್ತಿದೆ.

ಭಾರೀ ವಿದ್ಯುತ್ ಬಿಲ್‌ಗಳಿಗೆ ವಿದಾಯ ಹೇಳುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗೃಹ ಜ್ಯೋತಿ ಯೋಜನೆಯು **200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್** ನೀಡುವ ಮೂಲಕ ವಿದ್ಯುತ್ ವೆಚ್ಚದ ಹೊರೆಯನ್ನು ನಿವಾರಿಸುತ್ತಿದೆ. ಈ ನಿಟ್ಟಿನಲ್ಲಿ ಈ ಯೋಜನೆಯನ್ನು ಇಂಧನ ಇಲಾಖೆಯಡಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಾದ ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಹಾಗೂ ಸೆಸ್ಕ್ – ಮೈಸೂರುಗಳಲ್ಲಿ ಅನುಷ್ಠಾನಗೊಳಿಸಿದೆ.

ಈ ಯೋಜನೆಯು ರಾಜ್ಯದಲ್ಲೇ ಮೊದಲ ಬಾರಿಗೆ ಅನುಷ್ಠಾನಗೊಂಡ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮವಾಗಿದ್ದು, ಇದರಿಂದ ರಾಜ್ಯದ 2.14 ಕೋಟಿ ಗೃಹ ಬಳಕೆ ಗ್ರಾಹಕರಿಗೆ ಅನುಕೂಲವಾಗುತ್ತದೆ. ಈ ಯೋಜನೆಯು 2023 ಆಗಸ್ಟ್ 1 (ಜುಲೈ ಮಾಹೆಯ ವಿದ್ಯುಚ್ಛಕ್ತಿ ಬಳಕೆ) ರಿಂದ ಜಾರಿಗೆ ಬರಲಿದ್ದು, ಅರ್ಹತೆಯ ಮಿತಿಯಲ್ಲಿರುವ ಫಲಾನುಭವಿಗಳು ಆಗಸ್ಟ್ 1 ರಿಂದ ಶೂನ್ಯ ಬಿಲ್ಲನ್ನು ಪಡೆಯಲಿದ್ದಾರೆ.

2022–23 ರ ಆರ್ಥಿಕ ವರ್ಷದನ್ವಯ ಸರಾಸರಿ ವಿದ್ಯುತ್ ಬಳಕೆ ಯೂನಿಟ್‌ಗಳ ಮೇಲೆ ಶೇಕಡ 10 ರಷ್ಟು ಹೆಚ್ಚಿನ ಬಳಕೆಯ ಮಿತಿಗೆ, ಅಂದರೆ ಒಟ್ಟು 200 ಯೂನಿಟ್‌ಗಳಿಗಿಂತ ಒಳಗಿದ್ದಲ್ಲಿ ಗ್ರಾಹಕರು ಈ ಯೋಜನೆಗೆ ಅರ್ಹರಾಗುತ್ತಾರೆ. ಗೃಹ ವಿದ್ಯುತ್ ಬಳಕೆದಾರರು ಬಾಡಿಗೆದಾರರಾಗಿದ್ದಲ್ಲಿ, ವಾಸದ ಮನೆಯ ವಿಳಾಸಕ್ಕೆ ಸಂಬಂಧಿಸಿದಂತೆ ಆಧಾರ್ ಸಂಖ್ಯೆಯನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ಜೋಡಣೆ ಮಾಡಿ ನೋಂದಾಯಿಸುವ ಮೂಲಕ ಸದರಿ ಸೌಲಭ್ಯವನ್ನು ಪಡೆಯಬಹುದು.

ಇನ್ನೂ 200 ಯೂನಿಟ್‌ಗಳ ಬಳಕೆಯ ಮಿತಿಯನ್ನು ಯಾವುದಾದರು ತಿಂಗಳಲ್ಲಿ ಮೀರಿದಲ್ಲಿ, ಆ ತಿಂಗಳ ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಿ, ಸದರಿ ಯೋಜನೆಗಳಲ್ಲಿ ಮುಂದುವರೆಯುವುದು. ಹಾಗೂ ಹೊಸ ಸಂಪರ್ಕ ಪಡೆದ ಗ್ರಾಹಕರಿಗೆ ಹಿಂದಿನ ಬಳಕೆಯ ವಿವರಗಳು ಲಭ್ಯವಿಲ್ಲದಿರುವುದರಿಂದ, ರಾಜ್ಯದ ಗೃಹ ಬಳಕೆದಾರರ ಮಾಸಿಕ ಸರಾಸರಿ ಬಳಕೆಯ ಪ್ರಮಾಣ 53 ಯೂನಿಟ್‌ಗಳನ್ನು ನಿಗದಿಪಡಿಸಿ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

### ಗೃಹ ಜ್ಯೋತಿ ಯೋಜನೆಯ ಪ್ರಯೋಜನಗಳು :

1. 200 ಯೂನಿಟ್‌ವರೆಗೆ ಉಚಿತ ವಿದ್ಯುತ್
2. ಬಳಕೆಯ ಆಧಾರದ ಮೇಲೆ ಅರ್ಹತೆ
3. ರಾಜ್ಯಾದ್ಯಂತ ಅನುಷ್ಠಾನ
4. ನಾಗರಿಕರಿಗೆ ಆರ್ಥಿಕ ಉಳಿತಾಯ
5. ಆಫ್‌ಲೈನ್ ಹಾಗೂ ಆನ್‌ಲೈನ್‌ಗಳಲ್ಲಿ ನೋಂದಣಿಗೆ ಅವಕಾಶ
6. ಭೇದ–ಭಾವವಿಲ್ಲದೆ ಪ್ರತಿ ನಾಗರಿಕರಿಗೂ ಅನ್ವಯ



### ಈ ಯೋಜನೆ ಪಡೆಯಲು ಅರ್ಹತೆಯ ಮಾನದಂಡಗಳೇನು ?

1. ಆಧಾರ್ ಕಾರ್ಡ್
2. ಆಧಾರ್ ಜೋಡಣೆಯಾದ ಮೊಬೈಲ್ ನಂಬರ್
3. ವಿದ್ಯುತ್ ಖಾತೆ ಸಂಖ್ಯೆ

### ಯೋಜನೆಗೆ ಬೇಕಾದ ಅರ್ಹತೆಗಳೇನು ?

1. ಗೃಹ ಬಳಕೆದಾರರಿಗೆ ಮಾತ್ರ ಈ ಸೌಲಭ್ಯ. ವಾಣಿಜ್ಯ ಹಾಗು ಕೈಗಾರಿಕಾ ಗ್ರಾಹಕರಿಗೆ ಈ ಸೌಲಭ್ಯವಿರುವುದಿಲ್ಲ.
2. ಗ್ರಾಹಕರು ಬಾಡಿಗೆ ಮನೆಯನ್ನು ಹೊಂದಿದ್ದಲ್ಲಿ, ಒಂದು ಆರ್.ಆರ್ ಸಂಖ್ಯೆಗೆ ಮಾತ್ರ ಈ ಸೌಲಭ್ಯ ದೊರೆಯಲಿದೆ.
3. ಗ್ರಾಹಕರು ಜೂನ್ 30 ರವರೆಗಿನ ವಿದ್ಯುತ್ ಬಿಲ್ ಬಾಕಿ ಮೊತ್ತವನ್ನು ಮುಂದಿನ 3 ತಿಂಗಳೊಳಗೆ ಪಾವತಿಸಬೇಕು.
4. ಅರ್ಹ ಗ್ರಾಹಕರಿಗೆ 2022–23 ರ ನಿಗದಿತ ಸರಾಸರಿ ವಿದ್ಯುತ್ ಬಳಕೆಗಿಂತ ಶೇ.10 ರಷ್ಟು ಹೆಚ್ಚಿನ ಬಳಕೆಗೆ ಉಚಿತ ವಿದ್ಯುತ್ ಸೌಲಭ್ಯವನ್ನು ನೀಡಲಾಗುತ್ತದೆ.
5. ನಿಗದಿತ 200 ಯೂನಿಟ್ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯುತ್ ಬಳಸಿದಲ್ಲಿ, ಗ್ರಾಹಕರು ಸಂಪೂರ್ಣ ವಿದ್ಯುತ್ ಬಿಲ್ ಮೊತ್ತವನ್ನು ಪಾವತಿಸಬೇಕಾಗುತ್ತದೆ.
6. ಈ ಯೋಜನೆಯು ಜುಲೈ–2023 ರ ಬಳಕೆಗೆ ಆಗಸ್ಟ್ 1 ರಿಂದ ಬರುವ ಬಿಲ್‌ಗೆ ಅನ್ವಯವಾಗುತ್ತದೆ.

### ಗ್ರಾಹಕರು ನೋಂದಾಯಿಸಿಕೊಳ್ಳುವುದು ಹೇಗೆ?

1. ಸೇವಾ ಸಿಂಧು ಪೋರ್ಟಲ್, ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಕೇಂದ್ರಗಳಲ್ಲಿ, ಗ್ರಾಮ ಪಂಚಾಯತ್, ನಾಡ ಕಛೇರಿ ಅಥವಾ ಎಲ್ಲಾ ವಿದ್ಯುತ್ ಕಚೇರಿಗಳಲ್ಲಿ ನೋಂದಾಯಿಸಬಹುದಾಗಿದೆ.
2. ಸೇವಾ ಸಿಂಧು ಪೋರ್ಟಲ್‌ಗೆ ಭೇಟಿ ನೀಡಿ : https://sevasindhugs.karnataka.gov.in
3. ನಿಮ್ಮ ಭಾಷೆಯನ್ನು ಆಯ್ಕೆ ಮಾಡಿ.
4. ನಿಮ್ಮ ವಿದ್ಯುತ್ ಬಿಲ್‌ನಲ್ಲಿ ಕಾಣುವ ಅಕೌಂಟ್ ಐಡಿಯನ್ನು ನಮೂದಿಸಿ.
5. ನಿಮ್ಮ ವಿವರಗಳನ್ನು ಪರೀಕ್ಷಿಸಿಕೊಳ್ಳಿ.
6. ನಿಮ್ಮ ನಿವಾಸಿ ವಿಧವನ್ನು ಆಯ್ಕೆ ಮಾಡಿ.
7. ನಿಮ್ಮ ಆಧಾರ್ ಸಂಖ್ಯೆಯನ್ನು ನಮೂದಿಸಿ.
8. ನಿಮ್ಮ ಆಧಾರ್ ಸಂಖ್ಯೆಗೆ ಜೋಡಿಸಲಾದ ಮೊಬೈಲ್ ಸಂಖ್ಯೆಯನ್ನು ನಮೂದಿಸಿ.
9. ಮೊಬೈಲ್ ಸಂಖ್ಯೆಗೆ ಸ್ವೀಕರಿಸಲಾದ ಓಟಿಪಿಯನ್ನು ನಮೂದಿಸಿ.
10. ನಂತರ ನಿಮ್ಮ ವಿವರಗಳನ್ನು ಇನ್ನೊಮ್ಮೆ ಪರೀಕ್ಷಿಸಿಕೊಂಡು Submit ಅನ್ನು ಒತ್ತಿರಿ.

**ಯೋಜನೆ ನೋಂದಣಿಗೆ QR Code ಬಳಸಿ**

**ಹೆಚ್ಚಿನ ಮಾಹಿತಿಗಾಗಿ:**

1. ಸಮೀಪದ ವಿದ್ಯುತ್ ಕಛೇರಿಯನ್ನು ಸಂಪರ್ಕಿಸಿ.
2. 24x7 ಸಹಾಯವಾಣಿ ಸಂಖ್ಯೆ 1912 ಕ್ಕೆ ಕರೆಮಾಡಿ.
3. ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ https://energy.karnataka.gov.in ಗೆ ಭೇಟಿ ನೀಡಿ.
4. ಬೆಸ್ಕಾಂನ ಅಧಿಕೃತ ವೆಬ್‌ಸೈಟ್ https://bescom.karnataka.gov.in/page/Gruha+Jyothi ಗೆ ಭೇಟಿ ನೀಡಿ.

# ವಿದ್ಯುತ್ ಗರಿಷ್ಠ ಬೇಡಿಕೆ ದಂಡ ತಡೆಗಟ್ಟಲು ಇಲ್ಲಿದೆ ಪರಿಹಾರ

ಕಳೆದ ತಿಂಗಳಿಗಿಂತ ಈ ಬಾರಿ ನಿಮ್ಮ ಮನೆಯ ವಿದ್ಯುತ್ ಬಿಲ್ ಅಧಿಕವಾಗಿದೆಯೇ, ಹೊಸದಾಗಿ ವಾಷಿಂಗ್ ಮಿಷನ್ ಅಥವಾ ಎ.ಸಿ ಖರೀದಿಸಿದ್ದೀರ, ಹಾಗಾದರೆ ಅಧಿಕ ವಿದ್ಯುತ್ ಬಳಸಿಕೊಳ್ಳುವ ಉಪಕರಣಗಳನ್ನು ಒಮ್ಮೆಗೇ ಬಳಸದೆ ಗರಿಷ್ಠ ಬೇಡಿಕೆ ದಂಡದಿಂದ (MD Penality) ತಪ್ಪಿಸಿಕೊಳ್ಳಲು ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮವನ್ನು ಇಲ್ಲಿ ತಿಳಿದುಕೊಳ್ಳೋಣ.

ಈ ನಿಟ್ಟಿನಲ್ಲಿ ನಾವು ಬಳಸುವ ಸಂಪರ್ಕಿತ ಪ್ರಮಾಣಕ್ಕಿಂತ ಅಥವಾ ಮಂಜೂರಾದ ಲೋಡ್‌ಗಿಂತ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಬಳಸಿದ್ದಲ್ಲಿ ಬೆಸ್ಕಾಂ ಹೆಚ್ಚುವರಿ ಲೋಡ್ ದಂಡವನ್ನು ವಿಧಿಸುತ್ತದೆ. ಆಗ ಗ್ರಾಹಕರು ತಮ್ಮ ಜಕಾತಿಗೆ ಅನುಗುಣವಾಗಿ ವಿದ್ಯುತ್ ದರಕ್ಕಿಂತ ಒಂದುವರೆ ಪಟ್ಟು ಅಧಿಕ ದರದಲ್ಲಿ ಗರಿಷ್ಠ ಬೇಡಿಕೆ ದಂಡದೊಂದಿಗೆ ವಿದ್ಯುತ್ ಬಿಲ್ ಪಾವತಿಸಬೇಕಾಗುತ್ತದೆ.

ಇನ್ನೂ ಬೆಸ್ಕಾಂನ ಎಲ್.ಟಿ. ಜಕಾತಿಯ ಕೈಗಾರಿಕಾ ಗ್ರಾಹಕರು ತಮಗೆ ಮಂಜುರಾದ ಲೋಡ್ ಪ್ರಮಾಣಕ್ಕಿಂತ ಹೆಚ್ಚಿನ ಲೋಡ್ ಪ್ರಮಾಣವನ್ನು ಬಳಸಬಹುದಾಗಿದೆ. ಇಂತಹ ಪ್ರಕರಣಗಳಲ್ಲಿ, ಮಂಜೂರಾದ ಲೋಡ್ ಅಥವಾ ಗರಿಷ್ಠ ಬೇಡಿಕೆ ಇವೆರಡರಲ್ಲಿ ಯಾವುದು ಹೆಚ್ಚೋ ಅದು ಬಿಲ್ಲಿಂಗ್ ಬೇಡಿಕೆಯಾಗಿರುತ್ತದೆ. ಗ್ರಾಹಕರ ಗರಿಷ್ಠ ಬೇಡಿಕೆಯ ಪ್ರಮಾಣವು ಮಂಜೂರಾದ ಲೋಡ್‌ಗಿಂತ ಅಧಿಕವಾಗಿದ್ದಲ್ಲಿ ಸಾಮಾನ್ಯ ದರಕ್ಕಿಂತ ಎರಡು ಪಟ್ಟು ದರದಲ್ಲಿ ದಂಡದ ಮೊತ್ತವನ್ನು ಪಾವತಿಸಬೇಕಾಗುತ್ತದೆ.

ಆದ್ದರಿಂದ ಹೆಚ್ಚು ವಿದ್ಯುತ್ ಬಳಸುವ ವಿದ್ಯುತ್ ಪ್ರಮಾಣವನ್ನು ಒಮ್ಮೆಗೇ ಬಳಸದಿರಿ, ಹಾಗೆಯೇ ನಿಮ್ಮ ಸ್ಥಾವರಕ್ಕೆ ಮಂಜೂರಾದ



ಲೋಡ್ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ಮೂಲಕ ಗರಿಷ್ಠ ಬೇಡಿಕೆ ದಂಡದಿಂದ ತಪ್ಪಿಸಿಕೊಳ್ಳಿ.

### ಗರಿಷ್ಠ ಬೇಡಿಕೆ ದಂಡವನ್ನು ತಪ್ಪಿಸಿಕೊಳ್ಳುವುದು ಹೇಗೆ?

- ನಿಮ್ಮ ಮನೆ, ಕಟ್ಟಡ ಅಥವಾ ಸ್ಥಾವರಕ್ಕೆ ಮಂಜುರಾದ ಲೋಡ್ ಪ್ರಮಾಣವನ್ನು ಹೆಚ್ಚಿಸಿಕೊಳ್ಳಿ.
- ಹೆಚ್ಚು ವಿದ್ಯುತ್ ಬಳಕೆಯಾಗುವ ಉಪಕರಣಗಳನ್ನು (ಫ್ಯಾನ್, ಮಿಕ್ಸಿ, ವಾಷಿಂಗ್ ಮಷಿನ್) ಒಂದೇ ಸಮಯದಲ್ಲಿ ಬಳಸದಿರಿ.
- ಲೋಡ್ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಬೆಸ್ಕಾಂನ ಉಪವಿಭಾಗಗಳಲ್ಲಿ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಿ.

# ಸೋಲಾರ್ ರೂಫ್‌ಟಾಪ್ ಯೋಜನೆಗೆ ಸಿಗಲಿದೆ ಸಬ್ಸಿಡಿ



ಸೋಲಾರ್ ರೂಫ್‌ಟಾಪ್ ಯೋಜನೆ (solar rooftop scheme) ವಿದ್ಯುತ್ ಉಳಿತಾಯಕ್ಕೆ ಉತ್ತಮ ಪರಿಹಾರ ಕ್ರಮವಾಗಿದ್ದು, ಉಚಿತ ವಿದ್ಯುತ್ ಜೊತೆಗೆ ನಿಯಮಿತ ಆದಾಯ ಪಡೆಯಬಹುದು. ಹೌದು! ಕೇಂದ್ರ ಹಾಗು ರಾಜ್ಯ ಸರ್ಕಾರದ ಸೌರಗೃಹ ಯೋಜನೆಯಡಿ ಮನೆಯ ಮೇಲ್ಛಾವಣಿ ಮೇಲೆ ಸೌರ ಫಲಕ (ಸೋಲಾರ್ ಪ್ಯಾನಲ್) ಅಳವಡಿಸಲು ಸರ್ಕಾರದಿಂದ ಶೇ.40 ರಷ್ಟು ಸಬ್ಸಿಡಿ ಸಿಗಲಿದೆ. ಏನಿದು ಯೋಜನೆ ಎಂಬುದರ ಕುರಿತು ಈ ಲೇಖನ ಓದಿ.

ಎಂ.ಎನ್.ಆರ್.ಇ ನಲ್ಲಿ ಫೇಸ್–2 ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರ ಯೋಜನೆಯಡಿಯಲ್ಲಿ ಬೆವಿಕಂನ ಗೃಹ ಬಳಕೆ ಗ್ರಾಹಕರಿಗೆ ಮನೆಗಳ, ಅಪಾರ್ಟ್‌ಮೆಂಟ್‌ಗಳ, ವಸತಿ ಸಮುಚ್ಛಾಯಗಳ ಮೇಲ್ಛಾವಣಿಗಳ ಮೇಲೆ ಸೋಲಾರ ಘಟಕಗಳನ್ನು ಅಳವಡಿಸಲು ಸಬ್ಸಿಡಿ ಯೋಜನೆ ಹಲವರಿಗೆ ಸಹಕಾರಿಯಾಗಿದೆ.

ಮನೆಯ ಮೇಲ್ಛಾವಣಿ ಮೇಲೆ ಸೋಲಾರ್ ಘಟಕ ನಿರ್ಮಿಸುವ ಮೂಲಕ ವಿದ್ಯುತ್ ವೆಚ್ಚ ಉಳಿಸುವುದರೊಂದಿಗೆ, 20 ವರ್ಷಗಳವರೆಗೆ ವಿದ್ಯುತ್ ಕೂಡ ಪಡೆಯಬಹುದು. ಈ ಸೌರಶಕ್ತಿ ಫಲಕ ಅಳವಡಿಸಲು ಹೆಚ್ಚಿನ ಸ್ಥಳಾವಕಾಶ ಬೇಕಿಲ್ಲ. ಮನೆಯ ಮೇಲ್ಛಾವಣಿಯ ಖಾಲಿ ಜಾಗಕ್ಕೆ ತಕ್ಕಂತೆ ಸೌರಶಕ್ತಿ ಫಲಕಗಳನ್ನು ಸುಲಭವಾಗಿ ಅಳವಡಿಸಬಹುದು.

ಈ ಯೋಜನೆಯಡಿಯಲ್ಲಿ ಗ್ರಾಹಕರು ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಸಂಬಂಧಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಖುದ್ದು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ಈ ವೇಳೆ ಘಟಕ ಸ್ಥಾಪನೆಗೆ ಮನೆಗಳು ಅಥವಾ ಅಪಾರ್ಟ್‌ಮೆಂಟ್ ಸೂಕ್ತ ಎನಿಸಿದರೆ, ಯೋಜನೆ ಜಾರಿಗೆ ಮಂಜೂರಾತಿ ನೀಡಲಾಗುವುದು.

ನಿಮ್ಮ ಮನೆಯ ಮೇಲ್ಛಾವಣಿ ಮೇಲೆ 2 ಕಿಲೋ ವ್ಯಾಟ್ ಸೋಲಾರ್ ಪ್ಯಾನಲ್ ಅಳವಡಿಸಿದರೆ ನಂತರ ದಿನಕ್ಕೆ 10 ಗಂಟೆಗಳ ಕಾಲ ಬಿಸಿಲಿನ ಸಂದರ್ಭದಲ್ಲಿ ಸುಮಾರು 08 ಯೂನಿಟ್ ವಿದ್ಯುತ್ ಉತ್ಪಾದಿಸಬಹುದು. ನಾವು ತಿಂಗಳಿಗೆ ಲೆಕ್ಕಾಚಾರ ಮಾಡಿದರೆ ಎರಡು ಕಿಲೋ ವ್ಯಾಟ್ ಸೋಲಾರ್ ಪ್ಯಾನಲ್‌ನಿಂದ ಸುಮಾರು 240 ಯೂನಿಟ್ ವಿದ್ಯುತ್ ಉತ್ಪಾದಿಸಬಹುದು.

ಈ ಯೋಜನೆಯಡಿ ಉಪಯೋಗ ಪಡೆಯುವ ಗ್ರಾಹಕರಿಗೆ ಗರಿಷ್ಠ 3 ಕಿ.ವ್ಯಾ ಸಾಮರ್ಥ್ಯದ ಸೋಲಾರ್ ಘಟಕಗಳಿಗೆ ಶೇ.40 ರಷ್ಟು ಸಹಾಯಧನ, 3 ಕಿ.ವ್ಯಾ ಸಾಮರ್ಥ್ಯಕ್ಕಿಂತ ಹೆಚ್ಚು ಮತ್ತು 10 ಕಿ.ವ್ಯಾ ಸಾಮಾರ್ಥ್ಯದವರೆಗಿನ ಸೋಲಾರ್ ಘಟಕಗಳಿಗೆ ಶೇ.40 ಜತೆಗೆ ಶೇ.20 ರಷ್ಟು ಹೆಚ್ಚುವರಿ ಸಹಾಯಧನವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುತ್ತದೆ.

ವಸತಿ ಸಮುಚ್ಛಯಗಳ ಮೇಲ್ಛಾವಣಿಗಳ ಸಾಮಾನ್ಯ (ಕಾಮನ್ ಏರಿಯಾ ಮಾತ್ರ) ಸೌಲಭ್ಯಗಳಾದ ಲಿಫ್ಟ್, ಮೋಟರ್ ಮತ್ತು ಲೈಟ್‌ಗಳಿಗೆ ಸೋಲಾರ್ ಘಟಕಗಳ ಸ್ಥಾಪನೆಯ ಸಾಮಾರ್ಥ್ಯವನ್ನು ಗರಿಷ್ಠ 500 ಕಿ.ವ್ಯಾ ಸೀಮಿತಗೊಳಿಸಲಾಗಿದೆ. ಬೆಸ್ಕಾಂನಲ್ಲಿ ನೋಂದಣಿಗೊಂಡಿರುವ (ಎಂಪ್ಯಾನಲ್ಡ್) ಏಜೆನ್ಸಿಗಳ ಮೂಲಕ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಜೊತೆಗೆ ಸೋಲಾರ್ ಘಟಕಗಳನ್ನು ಅಳವಡಿಸಿ 5 ವರ್ಷಗಳ ಅವಧಿಗೆ ಏಜೆನ್ಸಿಗಳು ನಿರ್ವಹಣೆ ಮಾಡಬೇಕಾಗಿದೆ.

ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಜೂನ್ 10, 2022 ರಂದು ಯೋಜನೆ ಜಾರಿಗೆ ಸರಳೀಕೃತ ವಿಧಾನ ಜಾರಿಗೊಳಿಸಿ ಆದೇಶ ಹೊರಡಿಸಿರುತ್ತದೆ.

ನೋಂದಾಯಿತ ಏಜೆನ್ಸಿಗಳು ಫಲಾನುಭವಿಗಳ ಸೋಲಾರ್ ಪ್ಯಾನಲ್ ಸಾಮರ್ಥ್ಯವನ್ನು ನಿರ್ಣಯಿಸಲು ಸ್ಥಳ ಸಮೀಕ್ಷೆಯನ್ನು ಮಾಡಿ ಸೋಲಾರ ಘಟಕಗಳ ಸಾಮಾರ್ಥ್ಯವನ್ನು ನಿಗದಿಪಡಿಸುತ್ತಾರೆ. ಫಲಾನುಭವಿಗಳ ಮನೆಯ ಮೇಲ್ಛಾವಣಿಯಲ್ಲಿ ಅಳವಡಿಸಬಹುದಾದ ಸೋಲಾರ್ ಪ್ಯಾನಲ್ ಸಾಮರ್ಥ್ಯದ ಕುರಿತು ಗ್ರಾಹಕರಿಗೆ

(ಫಲಾನುಭವಿಗೆ) ಅಗತ್ಯ ಮಾರ್ಗದರ್ಶನ ನೀಡುತ್ತಾರೆ. ಹಾಗೆಯೇ ಯೋಜನೆಯನ್ನು ಪಡೆಯಲು ಬೇಕಾಗುವ ಅಗತ್ಯ ಅನುಮೋದನೆ, ನೆಟ್–ಮೀಟರ್ ಅಳವಡಿಕೆ ಮತ್ತು ಬೆಸ್ಕಾಂ ಅಧಿಕಾರಿಗಳಿಂದ ತಪಾಸಣೆ ನಡೆಸಲು ಸಹಾಯ ಮಾಡುತ್ತಾರೆ.

ಯಾವುದೇ ಏಜೆನ್ಸಿಯ ಪ್ರತಿನಿಧಿಗಳು ಗ್ರಾಹಕರನ್ನು ತಪ್ಪುದಾರ್ಿಗೆಳೆಯುವ ಮಾಹಿತಿಯನ್ನು ಒದಗಿಸಿದರೆ ಅಥವಾ ಪೋರ್ಟಲ್‌ನಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಉಲ್ಲಂಘಿಸಿದರೆ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವುದು ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಏಜೆನ್ಸಿಯ ವಿರುದ್ಧ ಏಸ್ಕಾಂಗಳು ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು, ಸೌರ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸಲು ಉದ್ದೇಶಿಸಿರುವ 40 ಗಿಗಾ ವ್ಯಾಟ್ ಸಾಮರ್ಥ್ಯದಲ್ಲಿ 4 ಗಿಗಾ ವ್ಯಾಟ್ (4000 ಮೆಗಾ ವ್ಯಾಟ್) ನಷ್ಟು ವಿದ್ಯುತ್ ಅನ್ನು ಗೃಹ ಬಳಕೆಯ ಗ್ರಾಹಕರ ಮೇಲ್ಛಾವಣಿಗಳಿಂದ ಉತ್ಪಾದಿಸಲು ಉದ್ದೇಶಿಸಲಾಗಿದೆ.

## ಹಸಿರು ಉಪಕ್ರಮದ ಒಂದು ಭಾಗ

- ನಿಮ್ಮ ಮನೆ ಅಥವಾ ಅಪಾರ್ಟ್‌ಮೆಂಟ್ ಮೇಲ್ಛಾವಣಿಯಲ್ಲಿ ಪರಿಸರ ಸ್ನೇಹಿ ವಿದ್ಯುತ್ ಉತ್ಪಾದಿಸಿ.
- ಪರಿಸರ ಸ್ನೇಹಿ ವಿದ್ಯುತ್ ಉತ್ಪಾದಿಸಿ ಹಣವನ್ನು ಸಂಪಾದಿಸಿ.
- ಸೌರಘಟಕಗಳ ಅಳವಡಿಕೆಗೆ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಲಭ್ಯ
- ವಸತಿಗೃಹ–ಅಪಾರ್ಟ್‌ಮೆಂಟ್–ವಸತಿ ಸಮುದಾಯಗಳ ಗ್ರಾಹಕರು ಈ ಯೋಜನೆಯ ಉಪಯೋಗ ಪಡೆಯಬಹುದು.
- ಸೌರಗೃಹ ಯೋಜನೆಯಿಂದ ಮಾಸಿಕ ವಿದ್ಯುತ್ ಬಿಲ್‌ನಲ್ಲಿ ಉಳಿತಾಯ ಮಾಡಬಹುದು.

**ಹಣ ಗಳಿಕೆ ಹೇಗೆ** : ಮನೆಯ ಮೇಲ್ಛಾವಣಿಯಲ್ಲಿ ಸೌರ ಸ್ಥಾವರ ಸ್ಥಾಪಿಸುವ ಮೂಲಕ ವಿದ್ಯುತ್ ಅನ್ನು ನೀವು ಮಾರಾಟ ಮಾಡಿ ಹಣ ಗಳಿಸಬಹುದು. ಬೆಸ್ಕಾಂ ನೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ನೀವು ವಿದ್ಯುತ್ ಮಾರಾಟ ಮಾಡಬಹುದು. ಇದಕ್ಕಾಗಿ ನೀವು ಬೆಸ್ಕಾಂ ಇಲಾಖೆಯಿಂದ ಪರವಾನಗಿ ಪಡೆಯಬೇಕಾಗುತ್ತದೆ.

## ರೂಫ್‌ಟಾಪ್ ಸೋಲಾರ್ ಪ್ಯಾನಲ್ ಗೆ ಸಹಾಯಧನ

- ಒಂದು ವಸತಿ ಗೃಹ ಅಥವಾ ವಸತಿ ಸಂಕೀರ್ಣದ ಮೇಲೆ 1 ಕಿಲೋವ್ಯಾಟ್‌ನಿಂದ 500 ಕಿಲೋವ್ಯಾಟ್‌ವರೆಗೂ ಸೌರ ವಿದ್ಯುತ್ ಉತ್ಪಾದನೆ ಮಾಡಬಹುದು.
- ಇದಕ್ಕೆ 20 ರಿಂದ 22 ಸಾವಿರ ರೂಪಾಯಿ ಅಂದರೆ ಶೇ.40 ರಷ್ಟು ಸಬ್ಸಿಡಿ ಸಿಗಲಿದೆ. ಇದೇ ಸಬ್ಸಿಡಿಯು ಮೂರು ಕಿಲೋವ್ಯಾಟ್‌ವರೆಗೂ ಸಿಗುತ್ತದೆ.
- 10 ಕಿಲೋವ್ಯಾಟ್ ಘಟಕ ಸ್ಥಾಪಿಸಿದರೆ 3 ಕಿಲೋವ್ಯಾಟ್‌ವರೆಗೂ ಶೇ.40 ರಷ್ಟು ಸಬ್ಸಿಡಿ ಹಾಗೂ ನಂತರದ ಏಳು ಕಿಲೋವ್ಯಾಟ್ ವರೆಗೆ ಶೇ.20 ರಷ್ಟು ಸಬ್ಸಿಡಿ ಸಿಗಲಿದೆ.

## ಸೋಲಾರ್ ರೂಫ್‌ಟಾಪ್ ಯೋಜನೆಯ ಅನುಕೂಲಗಳು :

- ಯೋಜನೆಯಡಿ ನಿಮ್ಮ ಮನೆ ಅಥವಾ ಹೌಸಿಂಗ್ ಸೊಸೈಟಿಯ ಛಾವಣಿಯ ಮೇಲೆ ಸೌರಫಲಕಗಳನ್ನು ಅಳವಡಿಸಬಹುದು.
- ಇದರಿಂದ ವಿದ್ಯುತ್ ಬಿಲ್ ಉಳಿತಾಯವಾಗುತ್ತದೆ. ಸೌರಫಲಕಗಳು ಕನಿಷ್ಠ 25 ವರ್ಷಗಳವರೆಗೆ ಹಾಳಾಗುವುದಿಲ್ಲ.
- ಸೌರಶಕ್ತಿಯು ಹಸಿರು ಶಕ್ತಿಯಾಗಿದ್ದು, ಮಾಲಿನ್ಯ ಉಂಟು ಮಾಡುವುದಿಲ್ಲ ಮತ್ತು ಪರಿಸರ ಸ್ನೇಹಿ ಕೂಡ ಹೌದು.

## ಯೋಜನೆಗೆ ಅರ್ಜಿ ಸಲ್ಲಿಕೆ ಹೇಗೆ ?

ಸೌರ ಗೃಹ ಯೋಜನೆ ಪ್ರಯೋಜನ ಪಡೆಯಲು ಗ್ರಾಹಕರಿಗೆ ಎರಡು ಆಯ್ಕೆಗಳನ್ನು ನೀಡಲಾಗಿದೆ. ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಯೋಜನೆ ಅನುಷ್ಠಾನವನ್ನು ಸರಳೀಕರಣಗೊಳಿಸಿದ್ದು, ಇಲಾಖೆ ಅಭಿವೃದ್ಧಿಪಡಿಸಿರುವ ವೆಬ್‌ಪೋರ್ಟಲ್ https://solarrooftop.gov.in ಮುಖಾಂತರ ಗ್ರಾಹಕರು ಅರ್ಜಿ ಸಲ್ಲಿಸಬಹುದಾಗಿದೆ.

ಕೇಂದ್ರ ಸರ್ಕಾರದ ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಿದರೆ, ಯೋಜನೆ ಅನುಷ್ಠಾನ ಇನ್ನಷ್ಟು ಸರಳ. ಸರ್ಕಾರದ ಸಹಾಯಧನ ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಇಲಾಖೆಯಲ್ಲಿ ಎಂಪ್ಯಾನಲ್ಡ್‌ಗೊಂಡಿರುವ ಏಜೆನ್ಸಿಗಳನ್ನು ಸಂಪರ್ಕಿಸಿ, ಸೋಲಾರ್ ಪ್ಯಾನೆಲ್‌ಗಳನ್ನು ಗ್ರಾಹಕರು ತಮ್ಮ ಮನೆಯ ಮೇಲ್ಛಾವಣಿಗಳಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಹಾಗೆಯೇ ಬೆಸ್ಕಾಂನಲ್ಲಿ ನೋಂದಣಿಗೊಂಡಿರುವ ಏಜೆನ್ಸಿಗಳ ಮೂಲಕ ಸೋಲಾರ್ ಫಲಕಗಳನ್ನು ಅಳವಡಿಸಿಕೊಳ್ಳಲು https://bescom.karnataka.gov.in/ ಮೂಲಕ ಗ್ರಾಹಕರು ಅರ್ಜಿ ಸಲ್ಲಿಸಬಹುದಾಗಿದೆ. ಅಥವಾ ಸಹಾಯವಾಣಿ ಸಂಖ್ಯೆ 080–22340816 ಕ್ಕೆ ಕರೆ ಮಾಡಬಹುದು.

## ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಹೇಗೆ ?

- ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಗ್ರಾಹಕರು https://solarrooftop.gov.in/ಲಿಂಕ್ ಮೇಲೆ ಕ್ಲಿಕ್ ಮಾಡಬೇಕು.
- ಕೇಂದ್ರ ಸರ್ಕಾರದ ಸೋಲಾರ್ ಘಟಕದ ವೆಬ್ ಪೇಜ್ ಓಪನ್ ಆಗುತ್ತದೆ.
- ಅಪ್ಲೈ ಫಾರ್ ಸೋಲಾರ್ ರೂಫಿಂಗ್ ಮೇಲೆ ಕ್ಲಿಕ್ ಮಾಡಬೇಕು.
- ನಿಮ್ಮ ರಾಜ್ಯದ ಲಿಂಕ್ ಮೇಲೆ ಕ್ಲಿಕ್ ಮಾಡಬೇಕು.
- ಸೋಲಾರ್ ಗೃಹಯೋಜನೆಯ ಗೈಡ್‌ಲೈನ್ಸ್ ಓದಿಕೊಳ್ಳಬೇಕು.
- ಎಷ್ಟು ವ್ಯಾಟ್‌ವರೆಗೆ ಎಷ್ಟು ಸಬ್ಸಿಡಿ ಸಿಗುತ್ತದೆ, ನೋಂದಣಿ ಶುಲ್ಕ ಸೇರಿದಂತೆ ಎಲ್ಲಾ ಮಾಹಿತಿ ಓದಿಕೊಂಡು ಕೆಳಗಡೆ ಓಕೆ ಮೇಲೆ ಕ್ಲಿಕ್ ಮಾಡಬೇಕು.
- ಆಗ ಅರ್ಜಿ ಓಪನ್ ಆಗುತ್ತದೆ. ಅಲ್ಲಿ ನಿಮ್ಮ ಕಂಸ್ಯೂಮರ್ ಐಡಿ ನಮೂದಿಸಿ ಫೆಚ್ (Fetch) ಮೇಲೆ ಕ್ಲಿಕ್ ಮಾಡಿ ಅಗತ್ಯ ಮಾಹಿತಿಗಳನ್ನು ಭರ್ತಿಮಾಡಬೇಕು.

# ಗುಣಮಟ್ಟದ ವಿದ್ಯುತ್ ಪೂರೈಕೆಗೆ ಡಿಎಎಸ್ ಸಹಕಾರಿ

ವಿದ್ಯುತ್ ಬಳಕೆದಾರರಿಗೆ ಗುಣಮಟ್ಟದ ಹಾಗೂ ಅನಿಯಮಿತ ವಿದ್ಯುತ್ ಒದಗಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ತಿನ ಗುಣಮಟ್ಟವನ್ನು ಜಾಗತಿಕ ಮಟ್ಟಕ್ಕೆ ಉನ್ನತೀಕರಣ ಹಾಗೂ ಸಮಾನೀಕರಿಸಲು ಹಾಗೂ ವಿತರಣ ವ್ಯವಸ್ಥೆಯನ್ನು ಸ್ವಯಂ ಚಾಲನೆಗೊಳಿಸುವ ನಿಟ್ಟಿನಲ್ಲಿ ಸ್ವಯಂಚಾಲಿತ ವಿತರಣಾ ವ್ಯವಸ್ಥೆ (ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್)ಯನ್ನು ಕೈಗೆತ್ತಿಕೊಂಡಿತ್ತು.

ನಗರದಲ್ಲಿ ವಿದ್ಯುತ್ ವ್ಯತ್ಯಯವಾದರೆ ಆಯಾ ದೂರುಗಳನ್ನು ಇತ್ಯರ್ಥ ಮಾಡಲು 60 ರಿಂದ 70 ನಿಮಿಷಗಳು ಬೇಕಾಗಿದ್ದು, ಗ್ರಾಹಕರಿಗೆ ಸಮಸ್ಯೆಯಾಗುತ್ತಿತ್ತು. ಸಮಸ್ಯೆ ಎಲ್ಲಿ ಉಂಟಾಗಿದೆ ಎಂಬುದನ್ನು ಪತ್ತೆಯಚ್ಚುವುದೇ ಬೆಸ್ಕಾಂ ಸಿಬ್ಬಂದಿಗೆ ದೊಡ್ಡ ಸವಾಲಾಗಿತ್ತು. ಈ ನಿಟ್ಟಿನಲ್ಲಿ ಹಾಲಿ ಇರುವ ವಿದ್ಯುತ್ ಜಾಲದ ನಿಯಂತ್ರಣ, ಮೇಲ್ವಿಚಾರಣೆ ಮತ್ತು 11 ಕೆವಿ ಮಾರ್ಗಗಳ ಸ್ವಯಂಚಾಲಿತ ಕಾರ್ಯಚರಣೆಗೆ ಒತ್ತು ಕೊಟ್ಟು ಡಾಸ್ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು.

ಪೋರ್ಚುಗೀಸ್ ಕಂಪನಿ Efacec ವಿನ್ಯಾಸಗೊಳಿಸಿದ ಡಾಸ್ ವ್ಯವಸ್ಥೆಯು ಫೀಡರ್‌ಗಳು, ವಿತರಣೆ, ನಿರ್ದೇಶನ ಹಾಗೂ ಕೇಂದ್ರಗಳ ಮೂಲಕ 5-6 ನಿಮಿಷದಲ್ಲೇ ಸಮಸ್ಯೆಯ ಸ್ಥಳವನ್ನು ಪತ್ತೆ ಹಚ್ಚಿ ಬೇರೊಂದು ವಿತರಣಾ ಕೇಂದ್ರದ ಮೂಲಕ ಈ ಭಾಗದ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಈ ಹಿಂದೆ ವಿದ್ಯುತ್ ವ್ಯತ್ಯಯ ಉಂಟಾದಾಗ ಸುಮಾರು ಸಾವಿರಾರು ಜನರು ಸಮಸ್ಯೆ ಅನುಭವಿಸುತ್ತಿದ್ದರು. ಡಿಎಎಸ್ ಯೋಜನೆಯಿಂದ ಸಮಸ್ಯೆ ಅನುಭವಿಸುವವರ ಸಂಖ್ಯೆ ಇಳಿಮುಖವಾಗಿರುವುದು ಸಂತಸಕರ.

### ಡಿಎಎಸ್ ಗೆ ಜೈಕಾ ಸಾಥ್ :

ಈ ಯೋಜನೆಗೆ 563 ಕೋಟಿ ರೂ. ವೆಚ್ಚ ಆಗಲಿದ್ದು, ಜಪಾನ್ ಇಂಟರ್ ನ್ಯಾಷನಲ್ ಕೋ ಆಪರೇಷನ್ ಏಜೆನ್ಸಿ (ಜೈಕಾ) 417 ಕೋಟಿ ರೂ. ನೀಡುವ ಮೂಲಕ ಆರ್ಥಿಕವಾಗಿ ಸಾಥ್ ನೀಡಿದೆ. ಉಳಿದ ಮೊತ್ತವನ್ನು ಬೆಸ್ಕಾಂ ಭರಿಸಲಿದೆ.

### ವ್ಯವಸ್ಥೆಯ ಮೇಲ್ವಿಚಾರಣೆಗೆ ಕೇಂದ್ರ ಕಚೇರಿ ಸ್ಥಾಪನೆ:

ಡಿಎಎಸ್ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ಹೆಚ್.ಎಸ್.ಆರ್ ಬಡಾವಣೆಯಲ್ಲಿ ಕೇಂದ್ರ ಕಚೇರಿ ತೆರೆಯಲಾಗಿದ್ದು, ಇಡೀ ನಗರದ ವಿದ್ಯುತ್ ಸರಬರಾಜು ವ್ಯವಸ್ಥೆಯ ಬಗ್ಗೆ ನಿಯಂತ್ರಣ ಹೊಂದಿರಲಿದೆ. ಈ ಕೇಂದ್ರದಲ್ಲಿ ಮುಖ್ಯ ನಿಯಂತ್ರಣ ಕೊಠಡಿ (ಎಂಸಿಸಿ), ಪೂರಕ ನಿಯಂತ್ರಣಕೊಠಡಿ (ಬಿಸಿಸಿ) ಎಂಬ ವಿಭಾಗಗಳಿದ್ದು, 11 ಕೆವಿ ಯ 120 ಫೀಡರ್‌ಗಳನ್ನು ಒಳಗೊಂಡಿದೆ. ಇದರಿಂದ ಕ್ಷಣಾರ್ಧದಲ್ಲಿ ಸಮಸ್ಯೆಯನ್ನು ಪತ್ತೆ ಹಚ್ಚಿ ಬಗೆಹರಿಸುವುದರೊಂದಿಗೆ, ವಿದ್ಯುತ್ ಉಳಿತಾಯವನ್ನು ಮಾಡಬಹುದಾಗಿದೆ.

### ಆರ್.ಎಂ.ಯು ಘಟಕ ಸ್ಥಾಪನೆ :

ನಗರದಲ್ಲಿ 1,590 ಆರ್.ಎಂ.ಯು ಘಟಕಗಳನ್ನು ಸ್ಥಾಪಿಸಲಾಗುತ್ತಿದ್ದು, ಪ್ರತಿ ಘಟಕಕ್ಕೆ 10 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ. ಈಗಾಗಲೇ 1,000 ಘಟಕಗಳನ್ನು ಸ್ಥಾಪಿಸಲಾಗಿದ್ದು, ಉಳಿದ ಘಟಕಗಳನ್ನು ಶೀಘ್ರವಾಗಿ ಸ್ಥಾಪಿಸಲಾಗುವುದು.



### ಉದ್ದೇಶಗಳು :

1. ಸ್ಕಾಡ ಹಾಗೂ ಅತ್ಯಾಧುನಿಕ ಡಿಎಂಎಸ್ ತಂತ್ರಜ್ಞಾನದ ಮೂಲಕ ಸ್ವಯಂಚಾಲಿತ 11 ಕೆವಿ ವಿದ್ಯುತ್ ಮಾರ್ಗಗಳ ಹಾಗೂ ವಿದ್ಯುತ್ ಜಾಲಗಳ ಸಮರ್ಪಕ ನಿಯಂತ್ರಣ
2. ಬೆಸ್ಕಾಂ ವಿದ್ಯುತ್ ಜಾಲದಿಂದ ನಿರಂತರ ವಿದ್ಯುತ್ ಪೂರೈಕೆಯಲ್ಲಿ ಉನ್ನತೀಕರಣ
3. ವಿದ್ಯುತ್ ಜಾಲದ ಉಪಕರಣಗಳ ದುರಸ್ಥಿ ಹಾಗೂ ವಿದ್ಯುತ್ ಪುನಃ ಸ್ಥಾಪನೆಗೆ ತಗಲುವ ಅವಧಿಯನ್ನು ಕಡಿತಗೊಳಿಸುವಿಕೆ
4. ಗ್ರಾಹಕರಿಗೆ ಉತ್ತಮಗುಣ ಮಟ್ಟದ ವಿದ್ಯುತ್ ಪೂರೈಕೆ
5. ವಿದ್ಯುತ್ ವಿತರಣಾ ಜಾಲದಲ್ಲಿನ ಉತ್ತಮ ಕಾರ್ಯದಕ್ಷತೆ ಹಾಗೂ ಕಡಿಮೆ ವೆಚ್ಚದ ನಿರ್ವಹಣೆ
6. ದೋಷಪೂರಿತ ವಿದ್ಯುತ್ ಮಾರ್ಗಗಳ ತ್ವರಿತ ಕಾರ್ಯನಿರ್ವಹಣೆ

### ಪ್ರಯೋಜನಗಳು :

1. ಬೆಂಗಳೂರು ನಗರದ 11 ಕೆವಿ ವಿದ್ಯುತ್ ಮಾರ್ಗಗಳನ್ನು ಸ್ವಯಂಕಾಲಗೊಳಿಸಿ ವಿದ್ಯುತ್ ಸರಬರಾಜಿನ ನಿಯಂತ್ರಣ ಹಾಗೂ ಕಾರ್ಯಚಾರಣೆಗಳನ್ನು ಮೇಲ್ವಿಚಾರಣೆಗೊಳಿಸಲು ನೆರವಾಗುತ್ತದೆ.
2. ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ಸಾಧ್ಯವಾಗುತ್ತದೆ.
3. ದೋಷಗಳನ್ನು ತ್ವರಿತಗತಿಯಲ್ಲಿ ಪತ್ತೆಹಚ್ಚುವ ಮೂಲಕ ವಿದ್ಯುತ್ ಅಡಚಣೆಯ ಸಮಯವನ್ನು ಕಡಿತಗೊಳಿಸಬಹುದಾಗಿದೆ.

# ಕೈಗಾರಿಕಾ ಗ್ರಾಹಕರಿಗೆ ಬೆಸ್ಕಾಂನ ಆಕರ್ಷಕ ಯೋಜನೆಗಳು !

ಬೆಸ್ಕಾಂ ತನ್ನ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುತ್ತಾ ಬಂದಿದ್ದು, ಮುಂದಿನ ಸುಸ್ಥಿರ ಭವಿಷ್ಯಕ್ಕಾಗಿ ಹಾಗೂ ಜನ ಸಾಮಾನ್ಯರಿಗೆ ಹಲವಾರು ಗ್ರಾಹಕ ಸ್ನೇಹಿ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ಯಶಸ್ವಿಯಾಗಿದೆ. ಅಂತೆಯೇ ಬೆಸ್ಕಾಂ ತನ್ನ ಹೆಚ್.ಟಿ (ಹೈಟೆನ್ಷನ್ ತಂತಿ ಮೂಲಕ ವಿದ್ಯುತ್) (ಕೈಗಾರಿಕಾ ವಲಯದ) ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆಗಳನ್ನು ನೀಡುತ್ತಿದೆ.

ಹೆಚ್.ಟಿ. ಗ್ರಾಹಕರಿಗೆ ಬೆಸ್ಕಾಂನ ಆಕರ್ಷಕ ರಿಯಾಯಿತಿ ಯೋಜನೆಗಳನ್ನು ನೀಡುತ್ತಿದ್ದು, ಖಾಸಗಿ ವಲಯದಿಂದ ಮುಕ್ತ ವಿದ್ಯುತ್ ಖರೀದಿ ಮಾಡುತ್ತಿರುವ ಕೈಗಾರಿಕಾ ಗ್ರಾಹಕರು ಇದೀಗ ಬೆಸ್ಕಾಂ ಆಕರ್ಷಕ ರಿಯಾಯಿತಿ ಯೋಜನೆಗಳಿಂದಾಗಿ ಬೆಸ್ಕಾಂ ತೆಕ್ಕೆಗೆ ಮರುಳುತ್ತಿದ್ದಾರೆ. ಕೈಗಾರಿಕಾ ಗ್ರಾಹಕರಿಗೆ ಬೆಸ್ಕಾಂ ಮೂರು ಪ್ರಮುಖ ರಿಯಾಯಿತಿಗಳನ್ನು ನೀಡುತ್ತಿದೆ.

- ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆ (DERS)
- ವಿಶೇಷ ಪ್ರೋತ್ಸಾಹ ಯೋಜನೆ (SIS)
- ಹಸಿರು ಜಕಾತಿ (Green Tariff)

## ಏನಿದು ರಿಯಾಯಿತಿ ವಿದ್ಯುಚ್ಛಕ್ತಿ ದರ(DERS) ಯೋಜನೆ?

ಎಲ್ಲ ವರ್ಗದ ಗ್ರಾಹಕರಿಗೆ ಅನ್ವಯಿಸುವಂತೆ ಪ್ರತಿ ಯೂನಿಟ್‌ಗೆ ಸರಾಸರಿ 1.85 ರೂ. ಹೆಚ್ಚಿಸಲು ಆಯೋಗಕ್ಕೆ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಪ್ರಸ್ತಾವನೆ ಸಲ್ಲಿಸಿದ್ದವು. ಇದನ್ನು ಪರಿಶೀಲಿಸಿದ ಆಯೋಗ ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆ ಹೆಚ್ಚಿಸಿತ್ತು.

2023ರ ಆರ್ಥಿಕ ವರ್ಷದಲ್ಲಿ ಮಳೆಗಾಲವನ್ನು ಹೊರತುಪಡಿಸಿ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ ಹೆಚ್.ಟಿ. ಗ್ರಾಹಕರ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ 1 ರೂ. ದಂಡ ಶುಲ್ಕ ವಿಧಿಸಲಾಗುತ್ತಿದೆ. ಹೆಚ್ಚುವರಿ ವಿದ್ಯುತ್ ಮಾರಾಟವನ್ನು ಉತ್ತೇಜಿಸಲು ಆಯೋಗವು ಹೆಚ್.ಟಿ. ಮತ್ತು ಎಲ್.ಟಿ 5 ವರ್ಗಗಳ ಗ್ರಾಹಕರಿಗೆ ಹೆಚ್ಚಿನ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ 6 ರೂ.ನಂತೆ ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆಯನ್ನು (KERC) ಮುಂದುವರಿಸಿದೆ.

ಬೆಸ್ಕಾಂ ತನ್ನ ಹೆಚ್.ಟಿ ಮತ್ತು ಎಲ್.ಟಿ 5 ಜಕಾತಿಯ ವಿದ್ಯುತ್ ಗ್ರಾಹಕರ ಸರಾಸರಿ ಮಾಸಿಕ ಬಳಕೆಗಿಂತ ಹೆಚ್ಚುವರಿ ಮಾಸಿಕ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6 ರಂತೆ ರಿಯಾಯಿತಿ ವಿದ್ಯುಚ್ಛಕ್ತಿ ದರದ ಕೊಡುಗೆ ನೀಡುತ್ತಿದ್ದು, ಅರ್ಹ ಗ್ರಾಹಕರು ಸಮೀಪದ ಉಪ ವಿಭಾಗದಲ್ಲಿ ಅರ್ಜಿ ಸಲ್ಲಿಸಿ ಈ ಸೌಲಭ್ಯವನ್ನು ಪಡೆಯ-ಬಹುದಾಗಿದೆ.

ಈ ಸೌಲಭ್ಯಕ್ಕೆ ಅರ್ಹರಾಗುವ ಹೆಚ್.ಟಿ ಮತ್ತು ಎಲ್.ಟಿ 5 ಜಕಾತಿಯ ಗ್ರಾಹಕರು ಯಾರೆಂದರೆ :

- ಹೆಚ್.ಟಿ 2 (ಎ) I ಮತ್ತು II – ಕೈಗಾರಿಕೆ,
- ಹೆಚ್.ಟಿ 2 (ಬಿ) I ಮತ್ತು II – ವಾಣಿಜ್ಯ ಮತ್ತು
- ಹೆಚ್.ಟಿ 2 (ಸಿ) I ಮತ್ತು II – ಶಿಕ್ಷಣ ಮತ್ತು ಆಸ್ಪತ್ರೆಗಳು
- ಎಲ್.ಟಿ 5 ಗ್ರಾಹಕರು : ಎಲ್ಲಾ ಸಣ್ಣ ಕೈಗಾರಿಕಾ ಘಟಕಗಳು.

ಇವುಗಳ ಉಪ ವರ್ಗದ ಗ್ರಾಹಕರು ಮಾತ್ರ ಸದರಿ ಯೋಜನೆಯಲ್ಲಿ ಎಂ.ಒ.ಯು ಅಡಿ ಸಹಿ ಮಾಡಲು ಅರ್ಹ ಫಲಾನುಭವಿಗಳಾಗುತ್ತಾರೆ. ಈ ಯೋಜನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಅಥವಾ ಪ್ರಯೋಜನಗಳನ್ನು ಪಡೆಯಲು ಸಮೀಪದ ಬೆಸ್ಕಾಂ ಉಪವಿಭಾಗಗಳನ್ನು ಸಂಪರ್ಕಿಸಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ವಿಳಾಸ dgmra.htschemes@gmail.com ಸಂಪರ್ಕಿಸಿ.




ಕಾಸಿಯಾ ಪದಾಧಿಕಾರಿಗಳ ಜೊತೆ ಇತ್ತೀಚೆಗೆ ನಡೆದ ಸಭೆಯಲ್ಲಿ ಬೆವಿಕಂ ವ್ಯವಸ್ಥಾಪಕ ನಿರ್ದೇಶಕ **ಶ್ರೀ ಮಹಾಂತೇಶ ಬೀಳಗಿ**, ನಿರ್ದೇಶಕ (ಹಣಕಾಸು) **ಶ್ರೀ ಜೆ. ದರ್ಶನ್** ಹಾಗು ನಿರ್ದೇಶಕ ತಾಂತ್ರಿಕ **ಶ್ರೀ ಹೆಚ್.ಜೆ. ರಮೇಶ್** ಭಾಗವಹಿಸಿದ್ದರು.

## ಹೆಚ್.ಟಿ. ಗ್ರಾಹಕರಿಗಾಗಿ ವಿಶೇಷ ಪ್ರೋತ್ಸಾಹ ಯೋಜನೆ (SIS):

ಹೆಚ್.ಟಿ. ಗ್ರಾಹಕರಿಗೆ ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗಿನ ಹೆಚ್ಚುವರಿ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ 1 ರೂ. ಹಾಗೂ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆವರೆಗಿನ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ 2 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಈ ಯೋಜನೆಯನ್ನು ಪಡೆಯುವ ಹೆಚ್.ಟಿ. ಗ್ರಾಹಕರು, ಓಪನ್ ಆಕ್ಸೆಸ್ ಅಡಿಯಲ್ಲಿ ವಿದ್ಯುತ್ ಅನ್ನು ಪಡೆಯಲು ಅವಕಾಶವಿರುವುದಿಲ್ಲ. ಆದಾಗ್ಯೂ, ಹೆಚ್.ಟಿ. ಗ್ರಾಹಕರು ಈಗಾಗಲೇ ಜನರೇಟರ್‌ಗಳೊಂದಿಗೆ ದೀರ್ಘಾವಧಿಯ ಒಪ್ಪಂದ ಮಾಡಿಕೊಂಡಿದ್ದರೆ, ಬೆಸ್ಕಾಂನ ಒಪ್ಪಂದಕ್ಕೆ ಒಳಪಟ್ಟು ಈ ಯೋಜನೆಯನ್ನು ಪಡೆಯಬಹುದಾಗಿದೆ. ಹಾಗೂ ಸದರಿ ಯೋಜನೆಯಿಂದ ನಿರ್ಗಮಿಸಲು ಗ್ರಾಹಕರು ಇಚ್ಛಿಸಿದಲ್ಲಿ 30 ದಿನಗಳ ಮುಂಚಿತವಾಗಿ ಸೂಚನೆ ನೀಡುವುದು ಕಡ್ಡಾಯವಾಗಿರುತ್ತದೆ.

ಅರ್ಹ ಹೆಚ್.ಟಿ. ಗ್ರಾಹಕರು ಯೋಜನೆಯ ಫಲಾನುಭವಿಗಳಾಗಲು ಹತ್ತಿರದ ಬೆಸ್ಕಾಂ ಉಪವಿಭಾಗಗಳನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ವಿಳಾಸ dgmra.work@gmail.com ಅನ್ನು ಸಂಪರ್ಕಿಸಿ.

## ಹಸಿರು ಜಕಾತಿ (Green Tariff) ಯೋಜನೆ:

ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ ಮತ್ತು ಬಳಕೆ ಉತ್ತೇಜನವನ್ನು ಕೆ.ಇ.ಆರ್.ಸಿ ಮುಂದುವರಿಸಿದೆ. ರಾಜ್ಯದಲ್ಲಿ ಹಸಿರು ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆಗಳು ಮತ್ತು ಹೆಚ್.ಟಿ ವಾಣಿಜ್ಯ ಗ್ರಾಹಕರು ಇಚ್ಛಿಸಿದಲ್ಲಿ, ಅವರ ಆಯ್ಕೆಯಂತೆ ಅನ್ವಯವಾಗುವ ಸಾಮಾನ್ಯ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಪಾವತಿಸಿ ಹಸಿರು ಜಕಾತಿ ಸೌಲಭ್ಯವನ್ನು ಪಡೆಯಬಹುದಾಗಿದೆ. ಇನ್ನೂ ವಿತರಣಾ ಸಂಸ್ಥೆಗಳು ಆರ್.ಪಿ.ಓ ಪೂರೈಸಿ ನಂತರದ ಹಸಿರು ವಿದ್ಯುತ್ತನ್ನು ಇಚ್ಛಿತ ಗ್ರಾಹಕರಿಗೆ ಸರಬರಾಜು ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ವಿಳಾಸ gmppfc.bescom@gmail.com ಅನ್ನು ಸಂಪರ್ಕಿಸಿ.

## ಒಂದು ಯೂನಿಟ್‌ಗೆ 6.43 ರೂ. ಖರ್ಚು :

ರಾಜ್ಯದಲ್ಲಿ ಶೇ.13 ರಷ್ಟು ವಿದ್ಯುತ್ ಸರಬರಾಜು ಮತ್ತು ಪ್ರಸರಣ ನಷ್ಟವಿದೆ. ಇದನ್ನು ಕಡಿಮೆ ಮಾಡಲು ವಿದ್ಯುತ್ ಸರಬರಾಜು ಮತ್ತು ಪ್ರಸರಣ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಒಂದು ಯೂನಿಟ್ ವಿದ್ಯುತ್ ಉತ್ಪಾದನೆಗೆ ಸರಾಸರಿ 6.43 ರೂ. ವೆಚ್ಚವಾಗುತ್ತದೆ. ಆದರೆ ಮಾರುವಾಗ ಪ್ರತಿ ಯೂನಿಟ್‌ಗೆ 8.43 ರೂ. ನಿಗದಿ ಮಾಡಲಾಗುತ್ತದೆ.

# ‘ಬೆಸ್ಕಾಂ ಮಿತ್ರ’ ಆ್ಯಪ್‌ನಲ್ಲಿ ಹೆಚ್ಚುವರಿ ಸೇವೆ ಲಭ್ಯ

**‘ಬೆಸ್ಕಾಂ ಮಿತ್ರ’** ಆ್ಯಪ್ ಒಂದು ಹಲವು ಪ್ರಯೋಜನ. ಹೌದು! ನೀವು ಇನ್ನು ಮುಂದೆ ಬೆಸ್ಕಾಂ ಕಚೇರಿಗೆ ಮಾಹಿತಿ ಪಡೆಯಲು, ಬಿಲ್ ಪಾವತಿಸಲು, ದೂರು ಸಲ್ಲಿಸಲು ಅಲೆಯಲೇಬೇಕಿಲ್ಲ. ಕರೆಂಟ್ ಕೈಕೊಟ್ಟರೆ ಪದೇ ಪದೇ ಕಛೇರಿಗಳಿಗೆ ಫೋನ್ ಕೂಡ ಮಾಡಬೇಕಿಲ್ಲ...!

ಈ ಆ್ಯಪ್ ಮೂಲಕ ವಿದ್ಯುತ್ ಬಿಲ್ ಪಾವತಿ, ವಿದ್ಯುತ್ ಸಂಬಂಧಿತ ದೂರುಗಳು ಹಾಗೂ ಬೆಸ್ಕಾಂನ ಸೇವೆಗಳ ಕುರಿತಾದ ಪ್ರತಿಕ್ರಿಯೆಗಳನ್ನು ಸಲ್ಲಿಸಬಹುದಾಗಿದ್ದು, ಇದೀಗ ಇನ್ನೂ ಹೆಚ್ಚಿನ ಗ್ರಾಹಕ ಸ್ನೇಹಿ ಯೋಜನೆಗಳು ಬೆಸ್ಕಾಂನ **ಬೆಸ್ಕಾಂ ಮಿತ್ರ** ಆ್ಯಪ್‌ನಲ್ಲಿ ಲಭಿಸುತ್ತದೆ.

ನಿಮ್ಮ ಕೈಯಲ್ಲಿ ನೆಟ್ ಸೌಲಭ್ಯ ಇರೋ ಮೊಬೈಲ್ ಇದ್ದರೆ ಸಾಕು. ನಿಮ್ಮೆಲ್ಲ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಪಡೆಯಬಹುದು. ಬೆಸ್ಕಾಂ ಮಾಹಿತಿಯುಳ್ಳ ‘ಬೆಸ್ಕಾಂ ಮಿತ್ರ’ ಆ್ಯಪ್ ಮೂಲಕ ನಿಮ್ಮ ದೂರುಗಳನ್ನು ಇಲ್ಲಿ ಸಲಿಸಾಗಿ ನಮೂದಿಸಬಹುದು.

ಈ ಆ್ಯಪ್‌ನಲ್ಲಿ ಬೆಸ್ಕಾಂ ನೀತಿ, ವಿಭಾಗವಾರು ಕಚೇರಿ, ಅಧಿಕಾರಿಗಳು, ಸಿಬ್ಬಂದಿ ಮಾಹಿತಿ, ದೂರವಾಣಿ, ಇ–ಮೇಲ್ ವಿಳಾಸ ಇರುತ್ತದೆ. ವಿದ್ಯುತ್ ಕಡಿತ ಮಾಡುವ ಮತ್ತು ಕೊಡುವ ಸಮಯ ಇರುತ್ತದೆ. ವಿದ್ಯುತ್ ಕಡಿತವಾದ ಕೂಡಲೇ ಗ್ರಾಹಕರ ಮೊಬೈಲ್‌ಗೆ ಸಂದೇಶ ರವಾನೆಯಾಗುತ್ತದೆ. ನಮ್ಮ ಮನೆಗಳ ಮೀಟರ್ ಕಾರ್ಯ, ವಿದ್ಯುತ್‌ದರ ಪಟ್ಟಿ, ಬಿಲ್ ಪಾವತಿ ಮಾಡುವ ಸಮಯ, ಬಾಕಿ ಹಾಗೂ ಹಿಂದೆ ಪಾವತಿ ಮಾಡಿದ ದರದ ವಿಚಾರಗಳನ್ನು ತಿಳಿಯಬಹುದು.

ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆ ಹೊಂದಿದ ಗ್ರಾಹಕರು ಆ್ಯಪ್ ಮೂಲಕ ಬಿಲ್ ಪಾವತಿ ಮಾಡುವ ಅವಕಾಶ ಇದರಲ್ಲಿದೆ. ಅಲ್ಲದೇ ವಿದ್ಯುತ್ ಸಂಪರ್ಕದಲ್ಲಿ ನ್ಯೂನತೆ, ಅವಘಡ ಮತ್ತು ಅಧಿಕಾರಿ, ಸಿಬ್ಬಂದಿ ಕಾರ್ಯ ವೈಖರಿ ಬಗ್ಗೆಯೂ ಕೂಡ ದೂರು ಸಲ್ಲಿಸಬಹುದು. ಈ ಸಮಸ್ಯೆಯನ್ನು ಇಲಾಖೆಯು 24 ಗಂಟೆಯಲ್ಲಿ ಪರಿಹರಿಸಲಿದೆ. ದೂರುಗಳು ಬಾಕಿ ಉಳಿದರೆ, ಏಕೆ ಬಾಕಿ ಉಳಿದಿದೆ ಎಂಬ ಮಾಹಿತಿ ಕೂಡ ಆ್ಯಪ್‌ನಲ್ಲಿ ಸುಲಭವಾಗಿ ಪಡೆಯಬಹುದು.

ಮನೆಗಳಿಗೆ, ಬೋರ್ವೆಲ್, ಕೈಗಾರಿಕೆಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲು ಮತ್ತು ವಿದ್ಯುತ್ ಪ್ರಮಾಣ ಹೆಚ್ಚಿಸಿಕೊಳ್ಳುವ ಕುರಿತು ಬಹುತೇಕ ಜನರಿಗೆ ಮಾಹಿತಿ ಇಲ್ಲ. ಅವರು ಆ್ಯಪ್‌ನಲ್ಲಿ ಈ ಬಗ್ಗೆ ತಿಳಿದ ಬೆಸ್ಕಾಂ ನಿಯಮದ ಪ್ರಕಾರ ಸಂಪರ್ಕ ಪಡೆಯಬಹುದಾಗಿದೆ.

ಬೆಸ್ಕಾಂ ತನ್ನ ಗ್ರಾಹಕರ ಅನುಕೂಲಕ್ಕಾಗಿ ಬೆಸ್ಕಾಂ ಮಿತ್ರ ಆ್ಯಪ್‌ಅಲ್ಲಿ ಹೊಸ ವೈಶಿಷ್ಟ್ಯಗಳನ್ನು ನವೀಕರಿಸಿದ್ದು, ಗ್ರಾಹಕರಿಗೆ ಮತ್ತಷ್ಟು ಸುಲಭ ಮಾರ್ಗಗಳನ್ನು ಸೂಚಿಸಿದೆ. ಅವು ಯಾವುವೆಂದರೆ:

1. **‘ಬೆಸ್ಕಾಂ ಮಿತ್ರ’** ಆ್ಯಪ್ ನಲ್ಲಿ ಪ್ರಸ್ತುತ ಹಾಗೂ ಹಿಂದಿನ ಬಿಲ್ ವಿವರಗಳು ಲಭ್ಯ. ಪ್ರಸ್ತುತ ಹಾಗೂ ಹಿಂದಿನ ವಿದ್ಯುತ್ ಬಿಲ್ ವಿವರಗಳು ಲಭಿಸುತ್ತಿದ್ದು, ಆ್ಯಪ್‌ನಲ್ಲಿ ಹಿಂದಿನ ಬಿಲ್‌ಗಳನ್ನು ಆಯ್ಕೆ ಮಾಡುವ ಮೂಲಕ ನಿಮ್ಮ ಬಿಲ್ ಸಂಖ್ಯೆ, ಬಿಲ್ಲಿಂಗ್ ಅವಧಿ ಮತ್ತು ಬಿಲ್ ಮೊತ್ತಗಳ ವಿವರಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.
2. ಬೆಸ್ಕಾಂ ಮಿತ್ರ ಮೊಬೈಲ್ ಆ್ಯಪ್‌ನಲ್ಲಿ ಇದೀಗ ಗುಂಪು ಪಾವತಿ ಕೂಡ ಸೌಲಭ್ಯವಿದೆ. ನಿಮ್ಮ ವಿವಿಧ ಅಕೌಂಟ್ ಐಡಿಗಳನ್ನು ಆಯ್ಕೆ ಮಾಡಿ ಹಾಗೂ ವಿದ್ಯುತ್ ಬಿಲ್‌ಗಳನ್ನು ಒಮ್ಮೆಗೇ ಪಾವತಿಸಬಹುದಾಗಿದೆ.
3. ಹೆಚ್ಚುವರಿ ಭದ್ರತಾ ಠೇವಣಿಯನ್ನು (ASD) ಬೆಸ್ಕಾಂ ಮಿತ್ರ ಆ್ಯಪ್ ಮೂಲಕ ಪಾವತಿಸಬಹುದಾಗಿದೆ.
4. ಗ್ರಾಹಕರು ಇದೀಗ ತಮ್ಮ ಬೆಸ್ಕಾಂ ಮಿತ್ರ ಆ್ಯಪ್‌ನಲ್ಲಿ ಅಡ್ಡ ಹೆಸರನ್ನು (Nick Name) ಕಡ್ಡಾಯವಾಗಿ ಬಳಸಬೇಕು.
5. ವಿದ್ಯುತ್ ಬಿಲ್ ಪಾವತಿಯ ಮೇಲೆ ಆಕರ್ಷಕ ಕೂಪನ್‌ಗಳನ್ನು ಪಡೆಯುವ ಸೌಲಭ್ಯ.
6. ವಿದ್ಯುತ್ ಸಂಬಂಧಿತ ದೂರುಗಳನ್ನು ಫೋಟೊ ಸಹಿತ ದಾಖಲಿಸುವ ಆಯ್ಕೆ
7. ಪ್ರೊಫೈಲ್ ನಿರ್ವಹಣೆಯನ್ನು ಬಳಸಿ, ಬಳಕೆದಾರರು ಪ್ರೊಫೈಲ್ ಅನ್ನು ನಿರ್ವಹಿಸಬಹುದು.
8. ಗೂಗಲ್ ಮ್ಯಾಪ್‌ಗಳಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳ ಚಿತ್ರಣ ಲಭ್ಯ.

## ವಿದ್ಯಾರ್ಥಿ ಪ್ರತಿಭೆ



ವಿದ್ಯಾರ್ಥಿ ಹೆಸರು : **ಹೆಚ್.ಎಸ್.ಕೀರ್ತನ್**

ತಂದೆಯ ಹೆಸರು : **ಶ್ರೀ ಹೆಚ್.ಎನ್.ಶೇಖರ್,** ಬೆರಳಚ್ಚುಗಾರ ಮುಖ್ಯ ಇಂಜಿನಿಯರ್(ವಿ) ಕಛೇರಿ, ಬೆವಿಕಂ, ಬೆಂ.ಮ.ಕ್ಷೇ. ದಕ್ಷಿಣ ವಲಯ

ಇವರ ಮಗ 10ನೇ ತರಗತಿ (ಐಸಿಎಸ್‌ಇ) ಪರೀಕ್ಷೆಯಲ್ಲಿ 92% **ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆ.**

## ಹುಟ್ಟುಹಬ್ಬದ ಶುಭಾಶಯಗಳು

2023ನೇ ವರ್ಷದ ಏಪ್ರಿಲ್–ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗೆ “ಬೆಸ್ಕಾಂ ಸ್ನೇಹಿ”ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**–ಸಂಪಾದಕೀಯ ಮಂಡಳಿ**

## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂ ಏಳಿಗೆಗೆ ಶ್ರಮಿಸಿ 2023ನೇ ವರ್ಷದ ಏಪ್ರಿಲ್–ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಬೆಸ್ಕಾಂ ಅಧಿಕಾರಿಗಳು / ಸಿಬ್ಬಂದಿಗೆ “ಬೆಸ್ಕಾಂ ಸ್ನೇಹಿ”ಯ ಹಾರ್ದಿಕ ಬೀಳ್ಕೊಡುಗೆ.

**–ಸಂಪಾದಕೀಯ ಮಂಡಳಿ**



ಇಂಧನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ ಸನ್ಮಾನ್ಯ **ಶ್ರೀ ಕೆ.ಜೆ. ಜಾರ್ಜ್** ಅವರು ಮೊದಲ ಬಾರಿಗೆ ಬೆಸ್ಕಾಂ ನಿಗಮ ಕಚೇರಿಗೆ ದಿನಾಂಕ 01-06-2023 ರಂದು ಭೇಟಿ ನೀಡಿದರು. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು **ಶ್ರೀ ಮಹಾಂತೇಶ ಬೀಳಗಿ**; ನಿರ್ದೇಶಕರು (ಹಣಕಾಸು) **ಶ್ರೀ ದರ್ಶನ್ ಜೆ.**; ನಿರ್ದೇಶಕರು ತಾಂತ್ರಿಕ; ಈ ವೇಳೆ **ಶ್ರೀ ರಮೇಶ್ ಹೆಚ್.ಜೆ** ಅವರು ನೂತನ ಸಚಿವರನ್ನು ಸ್ವಾಗತಿಸಿ, ಸನ್ಮಾನಿಸಿದರು.

## ಆತ್ಮೀಯ ಬೀಳ್ಕೊಡುಗೆ



ಬೆವಿಕಂ ನಿಗಮ ಕಾರ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) **ಶ್ರೀ ಗೋಪಾಲ್ ಸಾಲಿಯಾನ್** ಅವರು ಏಪ್ರಿಲ್ ತಿಂಗಳಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ಬೆವಿಕಂ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಮಹಾಂತೇಶ ಬೀಳಗಿ** ಅವರು ಸಾಲಿಯಾನ್ ದಂಪತಿಗಳನ್ನು ನಿಗಮ ಕಾರ್ಯಾಲಯದಲ್ಲಿ ಸನ್ಮಾನಿಸಿ ಆತ್ಮೀಯ ಬೀಳ್ಕೊಡುಗೆ ನೀಡಿದರು.

## ಸಂಪಾದಕೀಯ



ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕುರಿತು ನಮ್ಮಲ್ಲಿ ಈಗಿರುವ ಅಂಕಿ-ಅಂಶಗಳ ಪ್ರಕಾರ ಬೆವಿಕಂ ವ್ಯಾಪ್ತಿಯಲ್ಲಿ ಯಾವುದೇ ತರಹದ ಲೋಡ್ ಶೆಡ್ಡಿಂಗ್ ಅವಶ್ಯಕತೆ ಇರುವುದಿಲ್ಲ. ಆದರೆ ಫೆಬ್ರವರಿ 2023 ರಿಂದ ಮೇ 2023ರ ವರೆಗೆ ಶಾಲಾ-ಕಾಲೇಜುಗಳ ವಾರ್ಷಿಕ ಪರೀಕ್ಷೆಗಳು ಹಾಗು ಕರ್ನಾಟಕ ವಿಧಾನಸಭೆ ಚುನಾವಣೆ ಪ್ರಯುಕ್ತ ಯಾವುದೇ ಮುಂಜಾಗೃತ ದುರಸ್ಥಿ ಹಾಗೂ ಹೊಸ ಕಾಮಗಾರಿಗಳನ್ನು ಬೆವಿಕಂ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲು ಮಾರ್ಗ ಮುಕ್ತತೆ (line clearance) ಯನ್ನು ಕೆಪಿಟಿಸಿಎಲ್ ಅಥವಾ ಬೆವಿಕಂ ರವರಿಗೆ ನೀಡಿರುವುದಿಲ್ಲ ಚುನಾವಣೆ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕೆಪಿಟಿಸಿಎಲ್ ಹಾಗೂ ಬೆವಿಕಂ ಅಧಿಕಾರಿಗಳ ಜಂಟಿ ಸಭೆ ನಡೆಸಿ, ಸಭೆಯ ನಿರ್ಧಾರದಂತೆ ದುರಸ್ಥಿ ಮತ್ತು ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮತಿ ನೀಡಿ, ಈ ಕುರಿತು ಪತ್ರಿಕಾ ಪ್ರಕಟಣೆಗಳು ಹಾಗೂ ಬೆವಿಕಂ ಸಾಮಾಜಿಕ ಜಾಲತಾಣಗಳ ಮೂಲಕ ಮುಂಚಿತವಾಗಿ ಗ್ರಾಹಕರಿಗೆ ಮಾಹಿತಿ ನೀಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಲಾಗಿತ್ತು.

ದಿನಾಂಕ 18.06.2023 ರಿಂದ ಗೃಹಜ್ಯೋತಿ ಯೋಜನೆ ನೋಂದಣಿ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದ ಗ್ರಾಹಕರಿಗೆ ಸುಗಮವಾಗಿ ನೋಂದಣಿಗೆ ಅನುವು ಮಾಡಿಕೊಡಲು ಈ ಹಿಂದೆ ನೀಡಿದ್ದ ಮಾರ್ಗ ಮುಕ್ತತೆ ಆದೇಶವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ. ಹಾಗೆಯೇ ಅನಿಯಮಿತ ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ಬೆವಿಕಂನ ಕ್ಷೇತ್ರ ಮಟ್ಟದ ಅಧಿಕಾರಿಗಳು ವಿದ್ಯುತ್ ಮಾರ್ಗವನ್ನು ಅತೀ ಶೀಘ್ರದಲ್ಲಿ ದುರಸ್ಥಿ ಮಾಡಿ ವಿದ್ಯುತ್ ಪುನರ್ ಸ್ಥಾಪಿಸಲು ನಿರ್ದೇಶಿಸಲಾಗಿದೆ

**ಎಸ್.ಆರ್.ನಾಗರಾಜ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಇಂಧನ ಇಲಾಖೆ
ಕರ್ನಾಟಕ ಸರ್ಕಾರ



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಕೆ.ಜೆ. ಜಾರ್ಜ್
ಸನ್ಮಾನ್ಯ ಇಂಧನ ಸಚಿವರು
ಕರ್ನಾಟಕ ಸರ್ಕಾರ

# ಗೃಹ ಜ್ಯೋತಿ ಯೋಜನೆ

**ಉಚಿತ ಬೆಳಕು, ಸುಸ್ಥಿರ ಬದುಕು**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹ ಜ್ಯೋತಿ' ಯೋಜನೆಯಡಿ ಪ್ರತಿ ಗೃಹ ಬಳಕೆಯ ಗ್ರಾಹಕರಿಗೆ **ಮಾಸಿಕ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್.**

ಗೃಹ ಜ್ಯೋತಿ

- ಗ್ರಾಹಕರು ಸೇವಾ ಸಿಂಧು ಪೋರ್ಟಲ್ : https://sevasindhugs.karnataka.gov.in (ಮೊಬೈಲ್/ಕಂಪ್ಯೂಟರ್/ಲ್ಯಾಪ್‌ಟಾಪ್‌ಗಳಲ್ಲಿ) ಅಥವಾ ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ, ಗ್ರಾಮ ಪಂಚಾಯತ್, ನಾಡಕಛೇರಿ ಅಥವಾ ಎಲ್ಲಾ ವಿದ್ಯುತ್ ಕಛೇರಿಗಳಲ್ಲಿ ನೋಂದಾಯಿಸಬಹುದಾಗಿದೆ.
- ನೋಂದಣಿ ಮಾಡುವಾಗ ಆಧಾರ್ ಸಂಖ್ಯೆ, ವಿದ್ಯುತ್ ಬಿಲ್‌ನಲ್ಲಿ ನೀಡಲಾದ ವಿದ್ಯುತ್ ಖಾತೆ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು.
- ಹೆಚ್ಚಿನ ಮಾಹಿತಿಗಾಗಿ ಸಮೀಪದ ವಿದ್ಯುತ್ ಕಛೇರಿಯನ್ನು ಸಂಪರ್ಕಿಸಿ ಅಥವಾ 24 X 7 ಸಹಾಯವಾಣಿ ಸಂಖ್ಯೆ 1912 ಕ್ಕೆ ಕರೆಮಾಡಿ.

**ನೋಂದಾಯಿಸಲು ನೀಡಲಾದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ**

ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ ಗೆ ಭೇಟಿ ನೀಡಿ
https://energy.karnataka.gov.in

**ನೋಂದಣಿ ಜೂನ್ 18, 2023 ರಿಂದ ಆರಂಭ**


## ಸಂಪಾದಕ ಮಂಡಳಿ

| | |
|---|---|
| **ಶ್ರೀ ಮಹಾಂತೇಶ ಬೀಳಗಿ**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಹೆಚ್.ಜೆ.ರಮೇಶ್**, ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜ ಎಸ್.ಆರ್**, ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಡಾ. ಬಿ.ಅರವಿಂದ ಶೆಟ್ಟಿ**, ಸಾರ್ವಜನಿಕ ಸಂಪರ್ಕಾಧಿಕಾರಿ | ಸಹ ಸಂಪಾದಕರು |
| **ಶ್ರೀ ಇಂ. ಟಿ.ಎನ್.ಸುಧಾಕರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ.ಬಲರಾಮ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಇಂ. ರವೀಂದ್ರ**, ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಇಂ. ಮನೋಜ್‌ಕುಮಾರ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcrbescom@gmail.com

ಬೆವಿಕಂ
BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org